

ಹೋ ಚಿ ಮಿನ್ 1954–58ರವರೆಗೆ ವಾಸ ಇದ್ದ ಮನೆ

ಹೋಗುವಾಗ ಕೋಲ್ಕತ್ತಾಗೆ ಭೇಟಿ ಕೊಟ್ಟಿದ್ದರು. ಅಂತಿಮವಾಗಿ 1958ರಲ್ಲಿ 10 ದಿನಗಳ ಕಾಲ ವಿಯೆಟ್ನಾಂ ದೇಶದ ಅಧ್ಯಕ್ಷರಾಗಿ ಅಧಿಕೃತ ಭೇಟಿ ನೀಡಿದ್ದರು.

1946ರಲ್ಲಿ ಹೋ ಚಿ ಮಿನ್‌ರ ಕೋಲ್ಕತ್ತಾ ಭೇಟಿ ಕೆಲವು ಗಂಟೆಗಳ ಅವಧಿಗೆ ಮಾತ್ರ ಸೀಮಿತವಾಗಿದ್ದರೂ, ತಮ್ಮ ನಮ್ರತೆ, ಸಂಯಮ, ಸರಳತೆ ಹಾಗೂ ಶೋಷಿತ–ತುಳಿತಕ್ಕೊಳಗಾದವರ ಕುರಿತಾದ ಕಾಳಜಿಯಿಂದ ಭಾರತೀಯರನ್ನು ಪ್ರಭಾವಿಸಿದ್ದರು. ಹೋ ಚಿ ಮಿನ್ ಕೋಲ್ಕತ್ತಾ ಭೇಟಿಯನ್ನು ಹಿರಿಯ ಕ್ರಾಂತಿಕಾರಿ ಮೋಹಿತ್ ಸೇನ್ ತಮ್ಮ 'ಎ ಟ್ರಾವೆಲರ್ ಅಂಡ್ ದಿ ರೋಡ್' ಕೃತಿಯಲ್ಲಿ ಬಣ್ಣಿಸಿದ್ದಾರೆ. 'ಹೊಳಪು ಕಂಗಳ, ಬಿಳಿ ಗಡ್ಡದ ತೆಳ್ಳಗಿನ ವ್ಯಕ್ತಿಯನ್ನು ನಮಗೆಲ್ಲಾ ಪರಿಚಯಿಸಿದರು. ಚೀನೀ ಕಮ್ಯುನಿಸ್ಟರು ಧರಿಸುತ್ತಿದ್ದ ಸರಳ ದಿರಿಸನ್ನು ಧರಿಸಿದ್ದ ಆ ವ್ಯಕ್ತಿ ಕೊಂಚ ದಪ್ಪ ಚಪ್ಪಲಿಯನ್ನು ಹಾಕಿದ್ದರು. ಅವರೇ ಹೋ ಚಿ ಮಿನ್' ಎಂದು ಪುಸ್ತಕದಲ್ಲಿ ದಾಖಲಿಸಿದ್ದಾರೆ. ಈ ಭೇಟಿ ಅತ್ಯಂತ ಕಡಿಮೆ ಅವಧಿಯದ್ದಾದರೂ, ಹೋ ಚಿ ಮಿನ್ ಮತ್ತು ವಿಯೆಟ್ನಾಂ ಕ್ರಾಂತಿ, ಪಶ್ಚಿಮ ಬಂಗಾಳದ ಅದರಲ್ಲೂ ಕೋಲ್ಕತ್ತಾದ ಜನರ ಮೇಲೆ ಆಳವಾದ ಪ್ರಭಾವ ಬೀರಿತು. ಯಾವ ಮಟ್ಟಿಗೆ ಅಂದರೆ, ವಿಯೆಟ್ನಾಂ ಜನರ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸುವ ನಿಟ್ಟಿನಲ್ಲಿ ಕೋಲ್ಕತ್ತಾದಲ್ಲಿ ಪ್ರತಿಭಟನೆಗಳು ಮತ್ತು ಸಭೆಗಳು ಜರುಗಿದವು. ವಿಶೇಷವೆಂದರೆ ಭಾರತಕ್ಕೂ ಆಗ ಸ್ವಾತಂತ್ರ್ಯ ಲಭಿಸಿರಲಿಲ್ಲ. ಕೋಲ್ಕತ್ತಾ ಜನರು 1947ರ ಜನವರಿ 19 ಅನ್ನು 'ವಿಯೆಟ್ನಾಂ ದಿನ'ವೆಂದು ಘೋಷಿಸಿ, 1947ರ ಜನವರಿ 21ರಂದು ಸಾವಿರಾರು ವಿದ್ಯಾರ್ಥಿಗಳು 144 ಸೆಕ್ಷನ್ ಉಲ್ಲಂಘಿಸಿ ಕೋಲ್ಕತ್ತಾ ವಿಶ್ವವಿದ್ಯಾಲಯದ ಕ್ಯಾಂಪಸ್‌ನಿಂದ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪೊಲೀಸರು ಕೆಲವರನ್ನು ಬಂಧಿಸಿ, ಪ್ರತಿಭಟನಾನಿರತ ವಿದ್ಯಾರ್ಥಿಗಳನ್ನು ಚದುರಿಸಲು ಗುಂಡು ಹಾರಿಸಿದರು. ಸಿಟಿ ಕಾಲೇಜಿನ ವಿದ್ಯಾರ್ಥಿ ಧೀರ್ ರಂಜನ್ ಸೇನ್ ಮತ್ತು ಪ್ರೌಢಶಾಲೆ ವಿದ್ಯಾರ್ಥಿ ಸುಖೇಂದು ಬಿಸ್ವಾಸ್ ಇಬ್ಬರೂ ಶಾಸಕಾಂಗ ಭವನದ (ಈಗಿನ ಸೆಂಚುರಿ ಕಟ್ಟಡ) ಮುಂಭಾಗದಲ್ಲಿ ಪೊಲೀಸರ ಗುಂಡಿಗೆ ಮೃತಪಟ್ಟರು. ಇನ್ನೊಬ್ಬ ವಿದ್ಯಾರ್ಥಿ ರಣಮಿತ್ರ ಸೇನ್ ಎಂಬುವವನ ಕಾಲಿಗೆ ಪೊಲೀಸರ ಗುಂಡು ತಗುಲಿತ್ತು.

1958ರಲ್ಲಿ ಹೋ ಚಿ ಮಿನ್ ಭಾರತಕ್ಕೆ ಭೇಟಿ ನೀಡಿದಾಗ ರಣಮಿತ್ರ ಸೇನ್‌ನನ್ನು ಮಾತನಾಡಿಸಿ, ಮೃತಪಟ್ಟ ಇನ್ನಿಬ್ಬರು ವಿದ್ಯಾರ್ಥಿಗಳ ಕುಟುಂಬದವರನ್ನೂ ಭೇಟಿ ಮಾಡುವ ಇಂಗಿತ ವ್ಯಕ್ತಪಡಿಸಿದ್ದರು. ಆದರೆ ಆಗ ಅದು ಸಾಧ್ಯವಾಗದಾದಾಗ, ದೆಹಲಿಯಲ್ಲಿನ ವಿಯೆಟ್ನಾಂ ರಾಯಭಾರಿ ಕಚೇರಿಯ ಮೂಲಕ ತಮ್ಮ ಕೃತಜ್ಞತೆಯ ಭಾವನೆಗಳನ್ನು ಆ ಕುಟುಂಬಗಳಿಗೆ ವ್ಯಕ್ತಪಡಿಸಿದ್ದರು.

## ಅಮರ್ ನಾಮ್, ತುಮರ್ ನಾಮ್, ವಿಯೆಟ್ನಾಂ, ವಿಯೆಟ್ನಾಂ...

ಸಾಮ್ರಾಜ್ಯಶಾಹಿ ಆಕ್ರಮಣದ ವಿರುದ್ಧ ಹೋರಾಟ ನಡೆಸಿದ್ದ ವಿಯೆಟ್ನಾಂ ಜನರಿಗೆ ಬೆಂಬಲ ಸೂಚಿಸಿ ಭಾರತದಲ್ಲಿ ನಡೆಸಿದ್ದ ಪ್ರತಿಭಟನೆ, ಅದರಲ್ಲೂ ಭಾರತದ ಕ್ರಾಂತಿಕಾರಿ ಯುವಕರ ಘೋಷಣೆಯನ್ನು ವಿಯೆಟ್ನಾಂ ಜನರು ಎಂದಿಗೂ ಮರೆಯುವುದಿಲ್ಲ.

ಪಶ್ಚಿಮ ಬಂಗಾಳದಲ್ಲಿ ಯುವಕರು, 'ಅಮರ್ ನಾಮ್, ತುಮರ್ ನಾಮ್, ವಿಯೆಟ್ನಾಂ, ವಿಯೆಟ್ನಾಂ', 'ಗಂಗಾ, ಮೆಕಾಂಗ್ ಏಕ್ ನಾಮ್, ವಿಯೆಟ್ನಾಂ, ವಿಯೆಟ್ನಾಂ' ಎಂದು ಘೋಷಣೆಗಳನ್ನು ಕೂಗಿದರೆ, ಇತ್ತ ಬಾಂಬೆ ನಗರದಲ್ಲಿ 'ಮೇರಾ ನಾಮ್, ತೇರಾ ನಾಮ್: ವಿಯೆಟ್ನಾಂ, ವಿಯೆಟ್ನಾಂ' ಎಂದು ಯುವಕರು ಗರ್ಜಿಸಿದ್ದರು. ಭಾರತ ಮತ್ತು ವಿಯೆಟ್ನಾಂ ಸಂಬಂಧವನ್ನು ಬೆಟ್ಟದ ಮೇಲಿನ ನೆಲ್ಲಿಕಾಯಿ ಮತ್ತು ಸಮುದ್ರದ ಉಪ್ಪಿಗೆ ಹೋಲಿಸಬಹುದು. ಅವರ ನೋವಿಗೆ ಇಲ್ಲಿನ ಯುವಜನರು ಮಿಡಿದದ್ದು ಮಾತ್ರ ಐತಿಹಾಸಿಕ ಸತ್ಯ. ಜನಶಕ್ತಿಯು ಪ್ರಭುತ್ವದ ಶಕ್ತಿಗಿಂತ ಹಿರಿದಾದುದು ಎಂಬುದನ್ನು ವಿಯೆಟ್ನಾಂ, ಬಲಿಷ್ಠ ಅಮೆರಿಕವನ್ನು ಹಿಮ್ಮೆಟ್ಟಿಸುವ ಮೂಲಕ ವಿಶ್ವಕ್ಕೆ ಸಾರಿ ಹೇಳಿತು.

## ಬೆಂಗಳೂರಿಗೆ ಬಂದಿದ್ದ ಹೋ ಚಿ ಮಿನ್

1958ರ ಫೆಬ್ರುವರಿ 5ರಿಂದ 14ರವರೆಗೆ ಹೋ ಚಿ ಮಿನ್ ಭಾರತಕ್ಕೆ ವಿಯೆಟ್ನಾಂ ದೇಶದ ಅಧ್ಯಕ್ಷರಾಗಿ ಅಧಿಕೃತ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಹೋ ಚಿ ಮಿನ್ ಬೆಂಗಳೂರಿಗೆ ಬಂದಿದ್ದರು. ಆಗ ರಾಜ್ಯಪಾಲರಾಗಿದ್ದ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರು ಖುದ್ದಾಗಿ ವಿಮಾನ ನಿಲ್ದಾಣಕ್ಕೆ ಹೋಗಿ, ಹೋ ಚಿ ಮಿನ್ ಅವರನ್ನು ಸ್ವಾಗತಿಸಿದ್ದರು. ಆಗಿನ ಮೇಯರ್ ಉಪಸ್ಥಿತಿಯಲ್ಲಿ ಹೋ ಚಿ ಮಿನ್ ಅವರು ಕಾರ್ಪೊರೇಷನ್ ಆವರಣದಲ್ಲಿ ಗಿಡವನ್ನು ನೆಟ್ಟಿದ್ದರು. ಈಗಿನ ರಾಜಭವನವನ್ನು ಆಗ ರೆಸಿಡೆನ್ಸಿ ಎನ್ನುತ್ತಿದ್ದರು. ಅಲ್ಲಿಗೂ ಅವರು ಭೇಟಿ ನೀಡಿದ್ದರು. ಲಾಲ್‌ಬಾಗ್‌ನಲ್ಲಿ ಗ್ಲಾಸ್ ಹೌಸ್ ಹತ್ತಿರ ಕೂಕ್ ಪೈನ್ ಗಿಡವನ್ನು ಹೋ ಚಿ ಮಿನ್ ನೆಟ್ಟಿದ್ದರು. ಅದೀಗ ದೊಡ್ಡ ಮರವಾಗಿದೆ. ಬೆಂಗಳೂರಿನ 'ವೃಕ್ಷಕೃಷಿ ಸಂಘ' (ಅರ್ಬೋರಿಕಲ್ಚರ್ ಅಸೋಸಿಯೇಷನ್ ಆಫ್ ಇಂಡಿಯಾ) 2016ರಲ್ಲಿ ಹೊರತಂದ ಸ್ಮರಣಸಂಚಿಕೆಯ ಮುಖಪುಟದಲ್ಲಿ ಲಾಲ್‌ಬಾಗ್‌ನಲ್ಲಿ ಹೋ ಚಿ ಮಿನ್ ಅವರು ಗಿಡ ನೆಡುವ ಚಿತ್ರವಿದೆ.

'ಅತ್ಯಂತ ಸ್ನೇಹಪರ ಮತ್ತು ಎಲ್ಲರೂ ಇಷ್ಟಪಡುವ ಅಸಾಮಾನ್ಯ ವ್ಯಕ್ತಿ' ಎಂದು ಹೋ ಅವರನ್ನು ಜವಾಹರಲಾಲ್ ನೆಹರೂ ಬಣ್ಣಿಸಿದ್ದರು. ಆರು ದಶಕಗಳಾದರೂ ಲಾಲ್ ಬಾಗ್‌ನ ಗ್ಲಾಸ್ ಹೌಸ್ ಹತ್ತಿರ ಹೋ ಚಿ ಮಿನ್ ಅವರು ನೆಟ್ಟ ಕೂಕ್ ಪೈನ್ ಮರ ಮುಗಿಲು ಚುಂಬಿಸುವಂತೆ ನಿಂತಿರುವ ಹಾಗೆ, ಹೋ ಚಿ ಮಿನ್ ಕೂಡ ವಿಶ್ವದ ಇತಿಹಾಸದಲ್ಲಿ ಮುಗಿಲೆತ್ತರಕ್ಕೆ ಬೆಳೆದು ನಿಂತ ಹಚ್ಚ ಹಸುರಿನ ಮರದಂತೆ ಹಬ್ಬಿದ್ದಾರೆ.

ಹೋ ಚಿ ಮಿನ್ ಎಂದರೆ 'ಜ್ಞಾನಿ' ಅಥವಾ 'ಜ್ಞಾನದ ಬೆಳಕು ಕಂಡವ' ಎಂಬ ಅರ್ಥವಿದೆ. ವಿಯೆಟ್ನಾಂ ಸ್ವಾತಂತ್ರ್ಯ ಮತ್ತು ಏಕೀಕರಣದ ಬೆಳಕನ್ನು ಎಲ್ಲಾ ವಿಯೆಟ್ನಾಮಿಯರಿಗೆ ತಂದು ಕೊಡಲು ಪರಿತಪಿಸಿದ ಹೋ, ತಾವೇ ಉರಿದು ನಾಡಿಗೆ ಬೆಳಕು ನೀಡಿದ ಧೀಮಂತ ವ್ಯಕ್ತಿ ಮತ್ತು ಶಕ್ತಿ.

ಪ್ರತಿಕ್ರಿಯಿಸಿ: feedback@sudha.co.in